CALLING ATTENTION TO A MATTER OF URGENT PUBLIC IMPORTANCE

(i) re.—Hardship Caused to the people of Jewargi, Afzalpur and Yadgir Taluksin Gulba ra Distict due to the floods of Bheema river and the loss to the crops thereon.

ಶ್ರೀ ವಿ. ಎಲ್. ಪಾಟೀಲ್ (ಮಾನ್ಯ ಕಂದಾಯ ಸಚಿವರು).—ಗುಲ್ಬರ್ಗಾ ಜಿಲ್ಲೆಯಲ್ಲಿಯ ಗುಲ್ಬರ್ಗಾ ತಾಲ್ಲೂಕಿನಲ್ಲಿ ಮೂರನೇ ವಾರದ ಆಗಸ್ಟ್ ತಿಂಗಳಲ್ಲಿ ಭೀಮಾನದಿಗೆ ನೆರೆಹಾವಳಿ ಬಂದಾಗಿ ೧೭ ಹಳ್ಳಿಗಳು ಒಳಪಟ್ಟು ಅದರಲ್ಲಿ ೨೪೭ ಎಕರೆ ಭೂಮಿ ಹಾನಿಗೀಡಾಗಿ, ೨೭೬ ಕುಟುಂಬಗಳು ಮಹಾಪೂರದಿಂದ ತೊಂದರೆಗೀಡಾಗಿವೆ ಹಾನಿಯಾಗಿರುವ ನಷ್ಟದ ಅಂದಾಜು ರೂ. ೬.೦೫ ಲಕ್ಷವಿದೆ.

ಜೇವರ್ಗಿ ತಾಲ್ಲೂಕಿನಲ್ಲಿ ೩೨ ಹಳ್ಳಿಗಳು ಒಳಪಟ್ಟು ೧೯೧೭ ಎಕರೆ ಭೂಮಿ ಹಾನಿಗೀಡಾಗಿ, ೫೫೩ ಕುಟುಂಬಗಳು ಮಹಾಪೂರದಿಂದ ತೊಂದರೆಗೀಡಾಗಿವೆ. ನಷ್ಟದ ಅಂದಾಜು ೫ ೭೫ ಲಕ್ಷವಿದೆ.

ಅಫಜಲ್‌ಪುರ ತಾಲ್ಲೂಕಿನಲ್ಲಿ ೬ ಹಳ್ಳಿಗಳು ಒಳಪಟ್ಟು ೨೫ ಎಕರೆ ಭೂಮಿ ಹಾನಿಯಾಗಿ ೨೧೬ ಕುಟುಂಬಗಳು ಮಹಾಪೂರದಿಂದ ತೊಂದರೆಗೀಡಾಗಿವೆ. ನಷ್ಟದ ಅಂದಾಜು ರೂ. ೧.೧೦ ಲಕ್ಷವಿದೆ.

ಭೀಮಾ ನದಿಯು ಪ್ರವಾಹದಿದ ಯಾದಗೀರ್ ತಾಲ್ಲೂಕಿಗೆ ನೆರೆಹಾವಳಿಯು ಬಂಟಾಗಿಲ್ಲದಿರುವುದರಿಂದ ಯಾವ ತರಹದ ಹಾನಿಯು ಸಂಭವಿಸಿರುವುದಿಲ್ಲ.

ನೆರೆಹಾವಳಿಯು ಸಂತ್ರಸ್ಥರಿಗೆ ಪರಿಹಾರವನ್ನು ಒದಗಿಸಲಿಕ್ಕೆ ತಹಸೀಲ್‌ದಾರರಿಗೆ ಹಣವನ್ನು ಬಿಡುಗಡೆ ಮಾಡಲಾಯಿತು. ಅದು ಈ ಕೆಳಗಿನಂತಿದೆ.

೧)	ತಹಸೀಲ್‌ದಾರ್	ಗುಲ್ಬರ್ಗಾ	ರೂ. ೫೦,೦೦೦
೨)	,,	ಅಫಜಲ್‌ಪುರ	ರೂ. ೫೦ ೦೯೦
೩)	,,	ಜೇವರಗಿ	ರೂ. ೧.೦೨,೦೦೨

ಸ್ಥಳೀಯ ಅಧಿಕಾರಿಗಳು ನಷ್ಟ ಸಂಭವಿಸಿದ ಸಮೀಕ್ಷೆ ನಡೆಸಲು ಮತ್ತು ಆರ್ಹ ನೊಂದ ರೈತರಿಗೆ ಪರಿಹಾರ ನೀಡಲು ಸೂಕ್ತ ಕ್ರಮ ತೆಗೆದುಕೊಂಡಿರುತ್ತಾರೆ.

೧೦-೦೦ ಎ. ಎಂ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಹಣವನ್ನು ಬಿಡುಗಡೆ ಮಾಡಿರತಕ್ಕಂಥದ್ದನ್ನು ಕೂಡ ಹೇಳಿದ್ದಾರೆ. ಬೊನ್ನೆ ನಾನು ಕೂಡ ಗುಲ್ಬರ್ಗಾಕ್ಕೆ ಹೋಗಿದ್ದಾಗ ಡೆಪ್ಯುಟಿ ಕಮಿಷನರ್ ಮತ್ತು ತಹಸೀಲ್‌ದಾರ್‌ರವರ ಜೊತೆಯಲ್ಲಿ ಫೋನ್ ಮುಖಾಂತರ ಮಾತನಾಡಿದ್ದೇನೆ. ತಾವು ಹೇಳಿದ ಪ್ರಕಾರ ಅಫಜಲ್‌ಪುರ, ಜೇವರಗಿ ಈ ಭಾಗಗಳಲ್ಲಿ ಎಷ್ಟು ಹಳ್ಳಿಗಳು ಇರುತ್ತವೆಯೋ ಅಷ್ಟು ಹಳ್ಳಿಗಳಿಗೂ ಎಫೆಕ್ಟ್ ಆಗಿದೆ ಎಂದು ಹೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ರಿವರ್ ಬೆಟ್‌ನಲ್ಲಿರತಕ್ಕ ೬೦ ಹಳ್ಳಿಗಳಿಗೆ ಎಫೆಕ್ಟ್ ಆಗಿದ. ಇದನ್ನು ರಿಪೋರ್ಟ್‌ನಲ್ಲಿ ಕೂಡ ಹೇಳಿದ್ದಾರೆ. ತಹಸೀಲ್‌ದಾರರು ಕೂಡ ೬ ಲಕ್ಷ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಹೇಳಿದ್ದಾರೆ. ಆರು ಲಕ್ಷ ರೂಪಾಯಿಗಳೇ ಅಲ್ಲ, ೧೫ ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹಾನಿಯಾಗಿದೆ ಇದು ರಿವರ್ ಬೆಲ್ಟ್ ಏರಿಯಾ ಆದ್ದರಿಂದ ಇಷ್ಟು ನಷ್ಟ ಬಂದಿದೆ. ರಬಿ ಕ್ರಾಪ್ಸ್ ಸಂಪೂರ್ಣವಾಗಿ ನಾಶವಾಗಿರುತ್ತದೆ. ಈ ರಿವರ್ ಅಂದರೆ ಭೀಮಾನದಿಯು ಜೇವರಗಿ, ಅಫಜಲ್‌ಪುರ ಯಾದಗಿರ್ ಕಡೆ ಹರಿಯುವುದರಿಂದ ಈ ಭಾಗಗಳಿಗೆಲ್ಲಾ ಹಾನಿಯಾಗಿದೆ. ಆದರೆ ಇವತ್ತು ೫೦-೧೦೦ ರೂಪಾಯಿಗಳೆಂದು ಏನು ಹಣವನ್ನು ಬಿಡುಗಡೆ ಮಾಡಿದ್ದೀರಿ ಇದು ಸಾಲದು. ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು. ಗುಲ್ಬರ್ಗಾ ಡ್ರೈ ಏರಿಯಾ ಆಗಿರುತ್ತದೆ. ೨೫ ಎಕರೆ ಜಮೀನು ಇದ್ದರೂ ಸಹ ೧೦ ಚೀಲ ಜೋಳವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ೫ ಎಕರೆ ಜಮೀನು ಇರತಕ್ಕಂಥವರಿಗೆ ಪರಿಹಾರ ಕೊಡತಕ್ಕಂಥ ಪ್ರಾವಿಷನ್ ಏನು ಇದೆ, ಅದು ಕೂಡ ಎಲ್ಲಾ ರೈತರಿಗೂ ಲಭ್ಯವಾಗುತ್ತಿಲ್ಲ.

ಡೆಪ್ಯುಟಿ ಕಮಿಷನರ್‌ರವರ ಡಿಸ್‌ಪೋಸಲ್‌ಗಾಗಿ ಹಣ ಕೊಟ್ಟಿರುವುದು ಬಹಳ ಕಡಿಮೆ ಇರುತ್ತದೆ. ಎಷ್ಟು ಹಾನಿಯಾಗಿರುತ್ತದೆ ಎಂಬುದರ ಬಗ್ಗೆ ವಿಚಾರವನ್ನೇ ಮಾಡಿಲ್ಲ. ಮತ್ತೊಂದು ವಿಚಾರವೇನೆಂದರೆ ಉತ್ತರಿ ಮಳೆ ಜುಲೈತಿಂಗಳಲ್ಲಿ ಬರಬೇಕಾದ್ದು ಬಾರದೆ ಇದ್ದುದರಿಂದ ರಬಿಕ್ರಾಪ್ ಆಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಹೆಚ್ಚಿಗೆ ಹಣವನ್ನು ಬಿಡುಗಡೆಮಾಡಿದ್ದೇವೆಂದು ರಿಪೋರ್ಟ್‌ನಲ್ಲಿ ಹೇಳಿರತಕ್ಕಂಥದ್ದು ಸತ್ಯಕ್ಕೆ ದೂರವಾದ ಮಾತಾಗಿರುತ್ತದೆ. ಆದ್ದರಿಂದ ಹೆಚ್ಚಿಗೆ ಹಣವನ್ನು ಬಿಡುಗಡೆಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರು ಸುಮಾರು ೧೫ ಲಕ್ಷ ರೂಪಾಯಿ ಗಳಷ್ಟು ನಷ್ಟವಾಗಿದೆ ಎಂದು ಹೇಳಿದ್ದಾರೆ ೬ ಲಕ್ಷದ ೩ ಸಾವಿರ, ೫ ಲಕ್ಷದ ೭೫ ಸಾವಿರ, ೧೦ಲಕ್ಷದ ೧೦ ಸಾವಿರ, ಹೀಗೆ ಸುಮಾರು ೧೪-೧೫ ಲಕ್ಷ ರೂಪಾಯಿಗಳೆಂದು ಅಂದಾಜು ತೋರಿಸಿರುತ್ತಾರೆ. ನಾವು ನೋಡಿದಹಾಗೆ ಇಲ್ಲಿ ೫೦ ಲಕ್ಷ ರೂಪಾಯಿಗಳವರೆಗೂ ಲಾಸ್ ಆಗಿದೆ. ಮೂರು ತಾಲ್ಲೂಕುಗಳು ರಿವರ್ ಬೆಲ್ಟ್ ಏರಿಯಾ ಆಗಿರುವುದರಿಂದ ಮನೆಗಳು ಬಿದ್ದು ಹೋಗಿದೆ. ಮತ್ತೆ ಕ್ರಾಪ್ ಬಹಳಷ್ಟು ಲಾಸ್ ಆಗಿದೆ ಪ್ರಾಪರ್ಟೀಸ್‌ಗೆ ಡ್ಯಾಮೇಜ್ ಆಗಿದೆ. ನಷ್ಟವಾಗಿರುವುದಕ್ಕೆ ಬೇರೆ ಬೇರೆ ರೀತಿಯಲ್ಲಿ ಡೀಟೆಲ್ ಸ್ಟೇಟ್ ಮೆಂಟ್ ಕೊಡಲು ಆಗುವುದಿಲ್ಲ. ಜೇವರ್ಗಿಯಲ್ಲಿ, ಆಫಜಲ್‌ಪುರದಲ್ಲಿ ಎಷ್ಟು ಲಾಸ್ ಆಗಿದೆ ಎಂಬುದನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಪ್ರಾಪರ್ಟಿ ಎಷ್ಟು ಲಾಸ್ ಆಗಿದೆ ಎಂಬುದರ ಬಗ್ಗೆ ಸವಿಸ್ತಾರವಾಗಿ ಕೂಡ ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಪರಿಹಾರವಾಗಿ ಕೊಟ್ಟಿರತಕ್ಕಂಥ ಹಣ ಎರಡು ಲಕ್ಷ ರೂಪಾಯಿಗಳು ಬಹಳ ಕಡಿಮೆಯದಾಗಿರುತ್ತದೆ ಸುಮಾರು ೫೦ ಲಕ್ಷ ರೂಪಾಯಿಗಳಷ್ಟು ಲಾಸ್ ಆಗಿದೆ ಅಲ್ಲಿ ಬಿದ್ದುಹೋದಂಥ ಮನೆಗಳನ್ನು ಕಟ್ಟಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ? ಹಿಂದೆ ಇದೇ ರೀತಿಯಲ್ಲಿ ಶಿವಮೊಗ್ಗದಲ್ಲಿ, ಸೌತ್‌ಕೆನರಾದಲ್ಲಿ ನೆರಹಾವಳಿ ಉಂಟಾದಾಗ ಸ್ಪೆಷಲ್ ಗ್ರಾಂಟ್ ಎಂದು ಮನೆಗಳನ್ನು ಕಟ್ಟಿಕೊಳ್ಳಲು ಸುಮಾರು೪ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದರು ಆದೇ ರೀತಿಯಲ್ಲಿ ಎಷ್ಟು ಮನೆ ಗಳು ಲಾಸ್ ಆಗಿದೆ ಮತ್ತು ಎಷ್ಟು ಬಡ ರೈತರಿಗೆ ಬೆಳೆ ಹಾನಿಯಾಗಿದೆ ಅದಕ್ಕೆಲ್ಲಾ ಅವರಿಗೆ ಕಾಂಪೆನ್ಸೆ ಷನ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಏನಾದರೂ ರೂಲ್ಸ್ ಮಾಡಿದ್ದರೆ ಅದನ್ನು ಬಿಟ್ಟು ರಿಲ್ಯಾಕ್ಸ್ ಮಾಡಿ ಹಣವನ್ನು ಬಿಡುಗಡೆಮಾಡಿ ಎಂದು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಖರ್ಗೆಯವರು ಹೇಳಿದಹಾಗೆ ಈಗಾಗಲೇ ಸಂಬಂಧಪಟ್ಟವರು ದೂರನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಆದರ ಜೊತೆಗೆ ಅಧ್ಯಕ್ಷರೇ, ಇವತ್ತಿನವರೆಗೆ ನಾವು ಕೊಟ್ಟುಕೊಂಡು ಬಂದಿರತಕ್ಕಂಥ ಹಣದ ಬಗ್ಗೆ ಮಾಹಿತಿಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಮಾನ್ಯ ಸದಸ್ಯರಿಬ್ಬರು ಆ ಭಾಗದಿಂದ ಬಂದಿರತಕ್ಕಂಥವರು ಅವರ ಸೂಚನೆಯನ್ನು ಗಮನದಲ್ಲಿಟ್ಟುಕೊಂಡೇ ಎರಡು ಲಕ್ಷ ರೂಪಾ ಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅವಶ್ಯಕತೆ ಇದ್ದರೆ ಇನ್ನೂ ಕೊಡಲಿಕ್ಕೆ ಸಾಧ್ಯತೆ ಇದ್ದರೆ ಅದನ್ನು ಪಡಿಶೀಲನೆ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಿದ್ದುಹೋದಂಥ ಮನೆಗಳಿಗೆ ನಾವು ಹೋದಸಲ ಯಾವ ರೀತಿ ಪ್ರಾವಿಷನ್ ಮಾಡಿ ೬ ಸಾವಿರ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಿದ್ದೇವೋ ಅದೇರೀತಿಯಲ್ಲಿ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ಕ್ರಾಪ್ ಲಾಸ್ ಆಗಿರುವುದಕ್ಕೂ ಎಷ್ಟು ಆಗಿರುತ್ತದೆ ಅಷ್ಟನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ವಿ. ಎಲ್. ಪಟೀಲ್.—ಮನೆಗಳಿಗಾಗಲಿ, ಕ್ರಾಪ್ ಕಾಂಪೆನ್ಸೆಷನೆ ಆಗಲಿ ಬೆಳೆ ಬೆಳೆಸುವ ಸಾಲದ ವಿಷಯವಾಗಲಿ ಎಷ್ಟು ಕೊಡಬೇಕು ಎಂಬುದರ ಬಗ್ಗೆ ಕಾನೂನು ಪ್ರಕಾರ ಮಾಡುತ್ತೇವೆ ಮತ್ತು ಇನ್ನು ಹೆಚ್ಚಿಗೆ ಹಣ ಬೇಕಿದ್ದಲ್ಲಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುತ್ತೇನೆ.

ಶ್ರೀ ಧರ್ಮಸಿಂಗ್.—ನಾರ್ತ್ ಕೆನರಾ ಮತ್ತು ಸೌತ್ ಕೆನರಾಕ್ಕೆ ಹೋದವರ್ಷ ಜನತಾ ಮನೆ ಗಳಿಗೆ ಬಿಡುಗಡೆ ಮಾಡಿದಂತೆ ಹಣವನ್ನು ಬಿಡುಗಡೆ ಮಾಡಲು ನೇರವಾಗಿ ಉತ್ತರವನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ —ಸ್ಪೆಷಲ್ ಆಗಿ ಕಾನೂನನ್ನು ರಿಲ್ಯಾಕ್ಸ್ ಮಾಡಿಕೊಳ್ಳುವುದು ಬಹಳ ಅವಶ್ಯಕತೆ ಇದೆ.

ಶ್ರೀ ಜಾಪುಗೌಡ ದರ್ಶನಪುರ.—೧೯೮೦ನೇ ಇಸವಿಯ ನಂತರ ಗುಲ್ಬರ್ಗಾದಲ್ಲಿ ಆಫಜಲ್‌ಪುರ ಯಾದಗಿರ್‌ನಲ್ಲಿ ವಿಶೇಷವಾಗಿ ಮಳೆಯಾಗಿದ್ದರಿಂದ ಶಹಪುರದಲ್ಲಿ ಇರತಕ್ಕಂಥ ಸುಮಾರು ೮ ಟ್ಯಾಂಕ್‌ಗಳು ಕೆರೆಗಳು ಒಡೆದು ಸುಮಾರು ೧೩ ಲಕ್ಷ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಗಿರುವ ಬಗ್ಗೆ ಹೇಳಿರುತ್ತಾರೆ, ಇಲ್ಲಿ ಪೆಚ್ಚಿನ ಪ್ರಮಾಣದಲ್ಲಿ ಕುರುಬರೇ ಇದ್ದಾರೆ. ೪೦೫ನೇ ಕಾಯಿದೆಯ ಪ್ರಕಾರ ೫ ಎಕರೆಯೊಳ್ಗೆ ಬೆಳೆಯನ್ನು ಬೆಳೆಯತಕ್ಕಂಥ ಬೆಳೆಗಾರರಿಗೆ ನಷ್ಟ ಉಂಟಾದರೆ ಪರಿಹಾರ ಕೊಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಸ್ಪೆಷಲ್ ಆಗಿ ಲೆಟರನ್ನು ಬರೆದು ಕಾಯಿದೆಯನ್ನು ಉಲ್ಲಂಘನೆ ಮಾಡಿಯಾದರೂ ಬಡವರಿಗೆ ಆದರಲ್ಲೂ ವಿಶೇಷವಾಗಿ ಕುರುಬರೇ ಇರತಕ್ಕಂಥ ಈ ಪ್ರದೇಶಕ್ಕೆ ಚಂಚನಾಮೆದಾಡಿ ಕೊಡಿ ಈ ಕ್ಷೇತ್ರಕ್ಕೆ ರೆವಿನ್ಯೂ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದರೂ ಕೂಡ ಇಲ್ಲಿಯವರೆಗೆ ರೆವಿನ್ಯೂ ಡಿವಾರ್ಟ್‌ಮೆಂಟ್‌ನಿಂದ ಉತ್ತರ ಬಂದಿಲ್ಲ.

(ಗೊಂದಲ)

ಶ್ರೀ ಹನುಮಂತರಾವ್ ದೇಸಾಯ್.—ಮಾನ್ಯ ಅಧ್ಯಕ್ಷರೇ, ಭೀಮಾನದಿ ದಂಡೆಮೇಲೆ ಆಫಜಲ್‌ಪುರಕ್ಕೆ ಸೇರಿದ ಸುಮಾರು ೩೦ ಹಳ್ಳಿಗಳು ಬರುತ್ತವೆ. ೩೦ ಹಳ್ಳಿಗಳಲ್ಲೂ ಕಾರ್ಫ್‌ಗೆ ಸಂಪೂರ್ಣವಾಗಿ ನಷ್ಟವಾಗಿದೆ. ಅಲ್ಲದೆ ಅನೇಕ ಮನೆಗಳು ಕೂಡ ನೆಲಸಮ ಪ್ರವಾಹದಿಂದ ನಷ್ಟಕ್ಕೆ ಒಳಗಾಗಿವೆ. ಸರ್ಕಾರದ ರಿಪ್ರೆಸೆಂಟೇಟಿವ್‌ನ್ನು ಕೊಟ್ಟಿರತಕ್ಕಂಥದ್ದು ಸರಿಯಾಗಿಲ್ಲ. ಅಲ್ಲಿಗೆ ನಾವು ಹೋಗಿ ಬಂದಿದ್ದೇವೆ. ಸುಮಾರು ೧೫ ಲಕ್ಷ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಆದ್ದರಿಂದ ಈಗ ೫೦ಸಾವಿರ ರೂಪಾಯಿಗಳನ್ನು ಬಿಡುಗಡೆ ಮಾಡಿರುವುದಾಗಿ ಮಾನ್ಯ ಮಂತ್ರಿಗಳು ಹೇಳಿದಾರೆ. ಸುಮಾರು ೧೦ ಲಕ್ಷ ರೂಪಾಯಿಗಳನ್ನಾದರೂ ಕೊಡಲು ತೀವ್ರ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಶರಣಪ್ಪ.—ನನ್ನ ಕ್ಷೇತ್ರದಲ್ಲಿ ಬರುವಂತಹ ಸುಮಾರು ೩೦ ಹಳ್ಳಿಗಳ ರೈತರಿಗೆ ಇದರಿಂದ ತೊಂದರೆಯಾಗಿದೆ. ಜಮೀನಿನಲ್ಲಿ ನೀರು ತುಂಬಿಕೊಂಡ ಕಾರಣದಿಂದ ರೈತರು ಬೆಳೆದ ತೊಗರಿ ಮತ್ತು ಶೇಂಗ ಬೆಳೆ ಕೊಚ್ಚಿಕೊಂಡು ಹೋಗಿದೆ. ರೈತರು ಈಗಾಗಲೇ ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸಹ ಸ್ಥಳ ಪರಿಶೀಲನೆ ಮಾಡಿ ವಿವರವಾದ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಆದರಿಂದ ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್,—ಅಲ್ಲಿನ ಸ್ಥಿತಿಯನ್ನು ಎಲ್ಲಾ ಮಾನ್ಯ ಸದಸ್ಯರೂ ಸಹ ಹೇಳಿದ್ದಾರೆ, ಪರಿಸ್ಥಿತಿ ಬಹಳ ಹದಗೆಟ್ಟಿದೆ. ರೈತರಿಗೆ ಬಹಳ ತೊಂದರೆಯಾಗಿದೆ. ಬದು ಏಕರೆಯವರಿಗೆ ಮಾತ್ರ ಪರಿಹಾರ ಕೊಟ್ಟಿರೆ ಬೇರೆಯವರಿಗೆ ತೊಂದರೆಯಾಗುತ್ತದೆ. ಆದರಿಂದ ನಷ್ಟಕ್ಕೆ ಒಳಗಾದ ಎಲ್ಲರಿಗೂ ಪರಿಹಾರ ಒದಗಿಸಲು ವ್ಯವಸ್ಥೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಂತೆ ತಾವು ಟೆಲಿಗ್ರಾಂ ಕಳುಹಿಸಿ ಕೊಡಬೇಕು.

ಶ್ರೀ ಎ. ಎಲ್. ಪಾಟೀಲ್.—ಈ ಗಮನ ಸೆಳೆಯುವ ಸೂಚನೆಗೆ ಉತ್ತರ ತಯಾರು ಮಾಡಿದ ನಂತರವೂ ಸಹ ಅಲ್ಲಿ ಮೇಲಿಂದ ಮೇಲೆ ಮಳೆಯಾಗಿದೆ. ಅನೇಕ ಕೆರೆಗಳು ಒಡೆದು ಹೋಗಿವೆ. ಇದರ ಜೊತೆಗೆ ಮಹಾರಾಷ್ಟ್ರದವರು ಭೀಮಾನದಿಯಲ್ಲಿ ನೀರನ್ನು ಬಿಟ್ಟಿರುವುದರಿಂದ ಫ್ಲಡ್ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಈ ಕಡೆಯ ಮಂತ್ರಿ ಆ ಕಡೆಯ ನನ್ನ ಸ್ನೇಹಿತರು ಕೊಟ್ಟಂತಹ ಅಭಿಪ್ರಾಯ ಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ತರಿಸಿಕೊಂಡು ನಾವು ಶಕ್ಯವಿದ್ದಷ್ಟು ಸಹಾಯ ಮಾಡುತ್ತೇವೆಂದು ಹೇಳುತ್ತೇನೆ.

(ii) re : Distubance caused on 31st August, 1983 at the time of inauguration of Gowdown and General Body meeting of Aldur Agricultural Co-operative Society in Chikka Magalure Dt.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲಾ ಆಲುದೂರು ವ್ಯವಸಾಯ ಸೇವಾ ಸಹಕಾರ ಸಂಘ, ನಿಯಮಿತ ಜನರಲ್ ಬಾಡಿ ಮೀಟಿಂಗ್ ಮತ್ತು ಗೋಡೌನ್ ಪ್ರಾರಂಭೋತ್ಸವ ದಿನಾಂಕ ೩೧-೮-೮೩ರಲ್ಲಿ ರಂದು ನಡೆದ ಸಂದರ್ಭದಲ್ಲಿ ರೈತ ಸಂಘದ ಸೋಗಿನಲ್ಲಿ